24. 1906ನೆ ಇಸವಿ ಡಿಸೆಂಬರು ಮಾಹೆ 1ನೆ ತಾರೀಖಿನಲ್ಲಿ ಕೂಡಿದ್ದ (ಫೈನಾನ್ಸ್ ಕಮಟಿ) ಸಂಘದಲ್ಲಿ ನಡೆದ ಪ್ರೊಸೀಡಿಂಗ್ಸ್ನ ಮತ್ತು 1907—1908ನೆ ಸಾಲಿನ ಬಡ್ಜೆಟ್ಟು ಅಂದಾಜು ಬದಲಾಯಿತು.

24. (1) ಈ ಸಂಘದವರಿಂದ ತಯಾರಾದ ಜಮಾ ಖರ್ಚು ಅಂದಾಜು ಬಡ್ಜೆಟ್ಟನ್ನು ಮಂಜೂರಾಗುವದಕ್ಕೆ ಗಾರ್ನಮೆಂಟಿಗೆ ಕಳಿಸಿಕೊಡಬೇಕೆಂತಲೂ ಮತ್ತು ಈ ತಹಲ್ ವರಿಗೂ ಲೋಕಲ್ ಫಂಡು ಆಸ್ಪತ್ರೆಗಳಿಗೆ ಕೊಡುವ ಕಂಟ್ರಿಬ್ಯೂಟಿಂಟ್ ಮೊಬಲಗಿನಲ್ಲಿ ಕೇರಿಸಿದ ಕಂಟ್ರಿ ಮೆಡಿಸಿನ್ಗೋಸ್ಕರ ಬೇರೆ ಮೊಬಲಗು 900 ರೂಪಾಯಿಗಳನ್ನೆ ದಾಖಲ್ ಮಾಡಲು ಕಾರಣವೇನೋ ಎಂದು ಸೀನಿಯರ್ ಸರ್ಜನ್ ಸಾಹೇಬರವರಿಗೆ ಬರಿಸಬೇಕೆಂತಲೂ ತೀರ್ಮಾನವಾಯಿತು.

(2) 26 ಮೈಲಿಗಳು ಘಾಸಲೆಯುಳ್ಳ ಮತ್ತು ಮೈಲಿ ಬಂದಕ್ಕೆ 150 ರೂಪಾಯಿ ಮೇರೆ ಸಾಲಾಬಾದ್ ಕಾಂಗಾರಿಗೆ, ಒಳಪಟ್ಟ ಮಾಲೂರು-ಹೊಸೂರು ರೈಲ್ವೆ ರಸ್ತೆಯನ್ನು ಪ್ರೊವಿನ್ಶಿಯಲ್ ಫಂಡಿಗೆ ಬದಲಾಯಿಸಬೇಕೆಂತ ಗಾರ್ನಮೆಂಟಿಗೆ ಶಿಫಾರ್ಸು ಮಾಡಬೇಕೆಂತಲೂ ತೀರ್ಮಾನವಾಯಿತು.

25. ಕಾಲವಾಗಿ ಹೋದ ಮೆ॥ ಎಂ. ಚಿನ್ನಪ್ಪನವರ ಸ್ಥಳಕ್ಕೆ ಮುನಿನಾರಣಯ್ಯ ಶೆಟ್ಟಿ ಯ್ಯನವರನ್ನು ಫೈನಾನ್ಸ್ ಸಂಘದ ಮೆಂಬರಾಗಿ ಮಾಡಬೇಕೆಂದು ಮೆ॥ ಸಿ. ನಾರಾಯಣಸ್ವಾಮಿ ಶೆಟ್ಟಿಯವರು ಸೂಚಿಸಿದರು. ಈ ಸೂಚನೆಯನ್ನು ಮೆ॥ ರಾಮರಾಯರು ಅನುಮೋದಿಸಿದರು. ಇದನ್ನು ಎಲ್ಲರೂ ಏಕವಾಕ್ಯತೆಯಿಂದ ಒಪ್ಪಿದರು.

26. ಮುಂದಿನ ಮಿಟಿಂಗ್ 23—3—07ನೆ ಮರ್ಕಂನಲ್ಲಿ ನಡಿಯಬೇಕೆಂದು ತೀರ್ಮಾನವಾಯಿತು.

ಸಿ. ಶ್ರೀಕಂಠೇಶ್ವರ ಐಯ್ಯರ್,
ಪ್ರೆಸಿ: ಆಫೀ.

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜಿ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವೆ ಪ್ರಸಿದ್ಧಪತ್ರಿಕೆ.

ತಾರೀಖು 25ನ ಜನವರಿ 1907.

1. ಕಂದಾಯದ ಬಾಕೀದಾರರಾದ ಸರ್ವಮಾನ್ಯ ಲಕ್ಷ್ಮೀಪುರ ಗ್ರಾಮದ ಇನಾಂದಾರ್ ಶ್ರೀನಿವಾಸ ಮೂರ್ತ್ಯಾಚಾರ್ಯ, ಕೃಷ್ಣ ಮೂರ್ತ್ಯಾಚಾರ್ಯ, ಭೋಗ್ಯದಾರ್ ಚನ್ನಮ್ಮನಿಂದ ಬರಬೇಕಾದ ಜಮೀನ್ ಕಂದಾಯದ ಬಾಬೀಗಾಗಿ ಇದರಕಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ಸರ್ವಮಾನ್ಯ ಲಕ್ಷ್ಮೀಪುರ-ತಾಲ್ಲೂಕು ಕಛೇರಿಯಲ್ಲಿ ಗ್ರಾಮ ಪೂರ್ತಾ 1907ನೆ ಇಸವಿ ಮಾರ್ಚಿ 9ನೆ ತಾರೀಖು ಶನಿವಾರ, ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಪೂರ್ವಿ 11 ಘಂಟೆಗೆ ಶುರುಮಾಡಿಸಲ್ಪಡುತ್ತೆ. ಸ್ವತ್ತು ಯಾವದಾ ಒಬ್ಬ ವರಭಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1905-06ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂಟ್ರಿಬ್ಯೂಶನ್ ಮೊಬಲಗು ಇದರಲ್ಲಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಕ್ಕೀಲ್ಮೇರಿಗೆ 2,484—4—10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ಪೊಮೊಬಲಗಿನ ಶೇಕಡ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತ್ತು ಬಾಕಿ ಮೊಬಲಗು ಹರಾಜು ತಾರೀಖ್ದು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತ್ತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಜವಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರಿಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳ್ಕೊವ ಯಾವ ಇತರ ಮನುಷ್ಯನೇ ಆಗಲೀ ಜಾಕೆಯಲ್ಲಿ ಬಂದಿರುವ ಪೂರಾ ಕಂದಾಯದ ಜಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸನ್ನೇತ ಹಾಜರ್ಮಾಡುವ ಪರ್ಯಂತ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಪೆಬ್ಲಿಟಿ ಕಮಿಷ್ಟನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತಗದುಕೊಂಡವರು ಹಾಜಿ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷ್ಟನರ ಮಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರಿ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮಿಷ್ಟನರವರಿಂದ ಸೈ ಮೊಹರಿ ಮಾಡಲ್ಪಟ್ಟ ಒಬ್ಬದು ಜಿ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ನಿವರಣೆಯಲ್ಲಿಯಾಗಲಿ ಯಾ ವಿಸ್ತೀರ್ಣದಲ್ಲಿಯಾಗಲಿ ಇರುವ ಸ್ವಲ್ಪ ಲಿಖಿತಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲೆ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಜಮೀನ್‌ದಾರರ ಹೆಸರು.	ಸ್ವತ್ತಿನ ತಪ್ಸೀಲು. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು	ಜಮೀನು. ನಂಬರ್ ಅಥವಾ ಹೆಸರು.	ಜಮೀನು. ಪೈಕೀ ಎಷ್ಟು ಬಾಗಾಯತು	ಜಮೀನು. ವಿಸ್ತೀರ್ಣ.	ಜಮೀನು. ಅಂದಾಜು ಕಿಮ್ಮತ್ತು.	ಸರಕಾರಕ್ಕೆ ಬರಬೇಕಾದ ಜಮೀನ್ ಕಂದಾಯ ಬಾಕಿ ಮೊಬಲಗು.
ಹೈ ಪ್ಯಾ ರಾಜಪೇಟೆ.	ಅಕ್ಕಿಹೆಬ್ಬಳು.	ಸರ್ವಮಾನ್ಯ ಜೊಮ್ಮನಹಳ್ಳಿ.	ಸರ್ವಮಾನ್ಯ ಇನಾಂದಾರರು, ಕೃಷ್ಣಮೂರ್ತ್ಯಾಚಾರ್ಯರು, ಹೆಗ್ಗಡದೇವನಹುಂಡಿ.	ಗ್ರಾಮ ಪೂರ್ತಿ.	ಖುಷ್ಕಿ, ತರಿ, ಬಾಗಾಯತು, ಖರಾಬು ಕೇರಿ.		683 14	962 4 0	2,482 12 10 ಜಿಲ್ಲಾ 1 8 0 ಖರ್ಚು	
				ಈ ಗ್ರಾಮ ಪೂರಾ ಸರಕಾರಕ್ಕೆ ಸಾಲಿಯಾನಾ ರೂಪಾಯಿ 62—0—10 ಲೋಕಲ್ ಸೆಸ್ ಬರಬೇಕಾದ್ದು.					2,484 4 10
				ಚೌತರ್ಫ್.						
				ಪೂರ್ವಕ್ಕೆ—ಪಲ್ಲಿಪಟ್ಟರ ಕಾವಲಿ ಗಡಿ.						
				ಪಶ್ಚಿಮಕ್ಕೆ—ಬಿಳಗನಹಳ್ಳಿ ಗಡಿ.						
				ದಕ್ಷಿಣಕ್ಕೆ—ತರಹೀನಹಳ್ಳಿ ಗಡಿ.						
				ಉತ್ತರಕ್ಕೆ—ಬಂಡಹೊಳೆ, ಕುಪ್ಪಹಳ್ಳಿ, ಬಿಳಗನಹಳ್ಳಿ, ಪಲ್ಲಿಪಟ್ಟದಕಾವಲು.						

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ನ ಪ್ರಸಿದ್ಧಪತ್ರಿಕೆ.

ತಾರೀಖು 25ನೆ ಜನವರಿ 1907.

1. ಕಂದಾಯದ ಬಾಕೀದಾರರಾದ ಸರ್ವಮಾನ್ಯ ಜೊಮ್ಮನಹಳ್ಳಿ ಇನಾಂದಾರ್ರು ಕೃಷ್ಣಮೂರ್ತ್ಯಾಚಾರ್ರು, ದಾಸಾಚಾರ್ರಿಂದ ಬರಬೇಕಾದ ಜಮೀರ್ಮಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ಸರ್ವಮಾನ್ಯ ಜೊಮ್ಮನಹಳ್ಳಿ—ತಾಲ್ಲೂಕ ಕಛೇರಿಯಲ್ಲಿ ಸನ್ 1907ನೆ ಮಾರ್ಚಿ 9ನೆ ತಾರೀಖು ಶನಿವಾರ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಆ ದಿವಸ ದವಿ 11 ಘಂಟೆಗ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜ್‌ದಾರನು 1906ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂಪ್ಯಲ್ಶರ್ಷ ಮೊಬಲಗು ಇದರಡಿ ಕಾಣಿಸಿರುವ ತಪ್ಪತ್ತಿಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 1,392—3—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಲ್ಲಿ ಸವಾಲ್ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಏಜವಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಅತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಎಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಧಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರ ವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ॥ ಪೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟಿ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸುಳ್ಳು ಲಿತ್ಯಗಳಿಗೆ ಗವರ್ಣ ಮೆಂಟಿನವರು ಜವಾಬ್ದಾರ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಣಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಡಾ ಅಪ್ಪೀಲಿನಲ್ಲಿ ಆಗುವ ಫೈಸಲೆ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪಸೀಲ್. ಕಟ್ಟಡಗಳು. ಕಬ್ಜಾದಾರರ ಹೆಸರು.	ಅಂದಾಜು ಕಿಮ್ಮತ್ತು ರೂ.	ಜಮೀನು. ನಂಬರ್ ಆಫ್ ಜಮೀನಿನ ಹೆಸರು.	ಖುಷ್ಕಿ, ತರಿ, ಬಾಗಾಯಿತು, ಅಥವಾ ಬಾಗಾಯಿತು ಅಲ್ಲದ್ದು.	ವಿಸ್ತೀರ್ಣ.	ಟಕ್ಕಾರು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
ಕೃಷ್ಣರಾಜಪೇಟೆ	ಹಳೆಹೆಬ್ಬಳ್ಳಿ	ಸರ್ವನಾಯ್ಕನಹಳ್ಳಿ	ಕಾಣಂದೂರ್ ಕೃಷ್ಣಪ್ಪನಾಯ್ಕರ್ ಮತ್ತು ದಾಸಾಚಾರ್ಯರು.	ಗ್ರಾಮ ಪೂರ್ತ.		ಖುಷ್ಕಿ, ತರಿ, ಬಾಗಾಯಿತು, ಪರಾಬ್ ಸಹ.	ಎ. ಗು. 688 17	ರೂ. ಆ. ಪೈ. 849 8 0.	ರೂ. ಆ. 7,390 11 — ಇನ್ ಕಂಟ್ರಿ ಬ್ಯೂರ್ಷ. 1 8 ಖರ್ಚು. 1,392 3

ಜವುತರ್ಫ್.
ಪೂರ್ವಕ್ಕೆ —ಎಡಹಳ್ಳಿ ಮತ್ತು ಬೆಳ್ಳಿಬಟ್ಟದ ಕಾವಲು ಗಡಿ.
ಪಶ್ಚಿಮಕ್ಕೆ —ಕುರ್ನೇನಹಳ್ಳಿ ಗಡಿ.
ದಕ್ಷಿಣಕ್ಕೆ —ಮುದವನಕೂಡಿ ಮತ್ತು ಬೆಳ್ಳಿಬಟ್ಟದಕಾವಲ್ ಗಡಿ
ಉತ್ತರಕ್ಕೆ —ಹೆರಣೇನಹಳ್ಳಿ ಗಡಿ.

ಸರ್ಕಾರಕ್ಕೆ ಸಾಲಿಯಾನಾ ಬರತಕ್ಕ ಲೋ॥ ಸೆಸ್ಸು 54—1—10 ಇದು ವಸೂಲು ಬಂದುಯಿದೆ ಬಾಕಿಯಿಲ್ಲ.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.

ಹರಾಜಿನ ಡಿಸ್ಟ್ರಿಕ್ಟ್.
ಇಸ್ತಿಹಾರ್ನಾಮೆ.

ತಾರೀಖು 25ನೇ ಜನವರಿ 1907ನೆ ಇಸವಿ.

ಆಲೂರು ಸಬ್ ತಾಲ್ಲೂಕು ಕುಂದೂರು ಹೋಬಳಿ ಜೋಡಿ ಸಮಸ್ತರಿಗೆ ಗ್ರಾಮವು ಜೋಡೀದಾರು ನಾರಣಾಚಾರ್ಯರು ವಗೈರೇರಿಂದ ಬರತಕ್ಕ ಜೋಡಿ ಬಾಕಿಗೋಸ್ಕರವಾಗಿ 1907ನೆ ಇಸವಿ ಮಾರ್ಚಿ ಮಾಹೆ 18ನೆ ತಾರೀಖು ಸೋಮವಾರ ದಿವಿ 11 ಘಂಟೆ ಲಾಗಾಯಿತು ಕುಂದೂರು ವೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚಿ ತಪಸೀಲ್ ಬಗ್ಗೆ 1907ನೆ ಇಸವಿ ಜನವರಿ 31ನೆ ಮರ್ತ್ಯಂ ಮೈಸೂರು ಗೆಜೆಟ್ಟಿನ 11ನೆ ಭಾಗದ 30—31ನೆ ಪುಟಗಳನ್ನು ನೋಡತಕ್ಕದ್ದು.

ಎಂ. ಎ. ನಾರಾಯಣಯ್ಯೈಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.
ಇಸ್ತಿಹಾರ್.

ತಾರೀಖು 21ನೆ ಜನವರಿ 1907.

ಮೈಸೂರು ಸೀಮೆಯ ಲೇಟ್ ಚೀಫ್ ಕಮಿಷನರವರಿಂದ ಕೊಡಲ್ಪಟ್ಟ ತಾರೀಖು 17—4—1867ನೆ ಮರ್ತ್ಯಂ 6ನೆ ನಂಬರು ಭೂಮಿಯಲ್ಲಿ ಹೂಳಲ್ಪಟ್ಟ ನಿಧಿಗಳ ಪತ್ತೆ ವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ —